# ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ(ರಿ)
# ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

# ಶೀರ್ಷಿಕೆ : ಮೌಲ್ಯಮಾಪನ ಪ್ರಕ್ರಿಯೆಗಳು ಮತ್ತು ವಿಧಗಳು


**ಡಾ. ರವಿ ಹೆಚ್**

ಸಹಾಯಕ ಪ್ರಾಧ್ಯಾಪಕರು

# ಮೌಲ್ಯಮಾಪನ ಪ್ರಕ್ರಿಯೆ

- ಬೋಧನೆಯಲ್ಲಿ ಏಕಮುಖ, ದ್ವಿಮುಖ, ತ್ರಿಮುಖ ಮತ್ತು ಬಹುಮುಖ ಪ್ರಕ್ರಿಯೆಗಳಿರುವುಂತೆ ಮೌಲ್ಯಮಾಪನದಲ್ಲೂ ಸಹ ಹಲವಾರು ಪ್ರಕ್ರಿಯೆಗಳನ್ನು ಕಾಣಬಹುದು.
- ಶೈಕ್ಷಣಿಕ ಮೌಲ್ಯಮಾಪನದಲ್ಲಿ ಹಲವು ವಿಶಾಲವಾದ ಮತ್ತು ವಿಶಿಷ್ಟವಾದ ಮೌಲ್ಯಮಾಪನ ವಿಧಾನಗಳಿವೆ. ಇವುಗಳನ್ನು ಉಪಯೋಗಿಸುವ ಉದ್ದೇಶ, ಸಂದರ್ಭ ಮತ್ತು ಹಿನ್ನಲೆಯಲ್ಲಿ ಇಂತಹ ಮೌಲ್ಯಮಾಪನದ ವಿಧಾನಗಳನ್ನು ಗುರ್ತಿಸುವ ಮತ್ತು ವಿಭಾಗಿಸುವ ಕಾರ್ಯ ಸಾಧ್ಯವಿದೆ. ಇವುಗಳು ಆಯಾ ಕ್ಷೇತ್ರಕ್ಕೆ ಉದ್ದೇಶಗಳನ್ನು ತತ್ವಗಳನ್ನು ಹೊಂದಿದ್ದು ಅವು ನಿರ್ವಹಿಸುವ ಕಾರ್ಯಗಳ ಆಧಾರದ ಮೇಲೆ ಕೆಳಕಂಡ ಪ್ರಕಾರಗಳನ್ನು ಕಾಣಬಹುದಾಗಿದೆ.
- 1. ರೂಪಣಾವಧಿ ಮೌಲ್ಯಮಾಪನ/Formattive Evaluation /ರಚನಾತ್ಮಕ
- 2. ಸಂಕಲನಾತ್ಮಕ ಮೌಲ್ಯಮಾಪನ/Summative Evaluation
- 3. ನಿಯೋಜನಾ ಮೌಲ್ಯಮಾಪನ/Placement Evaluation
- 4. ನೈದಾನಿಕ ಮೌಲ್ಯಮಾಪನ/ Diagnostic Evaluation /ದೌರ್ಬಲ್ಯ




# ರೂಪಣಾವಧಿ ಮೌಲ್ಯಮಾಪನ/ ರಚನಾತ್ಮಕ




- **ಅರ್ಥ :–** ಶೈಕ್ಷಣಿಕ ವರ್ಷದುದ್ದಕ್ಕೂ ಸುದೀರ್ಘವಾಗಿ ನಡೆಯುವ ಮೌಲ್ಯಮಾಪನ ಕ್ರಿಯೆಯನ್ನು ರಚನಾತ್ಮಕ ಅಥವಾ ರೂಪಣಾತ್ಮಕ ಮೌಲ್ಯಮಾಪನ ಎನ್ನುವರು.
- "ಬೋಧನೆಯ ವಿವಿಧ ಹಂತಗಳಲ್ಲಿ ಮಕ್ಕಳ ಕಲಿಕೆಯ ಪರಿಣಾಮವನ್ನು ತಿಳಿಯುವ ಕ್ರಮಕ್ಕೆ ರಚನಾತ್ಮಕ ಮೌಲ್ಯಮಾಪನ ಎಂದು ಕರೆಯುವರು."
- "ಶಾಲಾ ಸನ್ನಿವೇಶದಲ್ಲಿ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳು ನಿರಂತರವಾಗಿ ಸಾಗುವ ಸನ್ನೀವೇಶದಲ್ಲಿ ಆಗಾಗ್ಗೆ ಪರೀಕ್ಷಿಸಿ ಬೆಲೆ ಕಟ್ಟುವ ಕ್ರಮವನ್ನು ರಚನಾತ್ಮಕ ಮೌಲ್ಯಮಾಪನ ಎನ್ನುವರು.
- "ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗಿ ವರ್ಷದ ಕೊನೆಯವರೆಗೂ ಬೋಧನಾ ಅವಧಿಯಲ್ಲಿ ನಿರಂತರವಾಗಿ ಮಾಡುವ ಮೌಲ್ಯಮಾಪನಕ್ಕೆ ರೂಪಣಾತ್ಮಕ ಮೌಲ್ಯಮಾಪನ ಎನ್ನುವರು.

- “ವಿದ್ಯಾರ್ಥಿಗಳ ಸಾಧನೆಯನ್ನು ಒಂದು ಶೈಕ್ಷಣಿಕ ವರ್ಷದುದ್ದಕ್ಕೂ ಗುರುತಿಸುವಲ್ಲಿ ಯಾವುದು ಸಹಾಯಕವಾಗುವುದೋ ಅದಕ್ಕೆ ರೂಪಣಾವಧಿ ಮೌಲ್ಯಮಾಪನ ಎನ್ನುವರು.”
- ಬೋಧಿಸಿದ ಆಯಾ ಅಧ್ಯಾಯಗಳ ಕೊನೆಯಲ್ಲಿ ಪರೀಕ್ಷೆ ನಡೆಸುವುದರ ಮೂಲಕ ಬೋಧನೆ ಮತ್ತು ಕಲಿಕೆಯ ಪರಿಣಾಮವನ್ನು ಮೌಲ್ಯಮಾಪನ ಮಾಡುವ ಕ್ರಮಕ್ಕೆ ರೂಪಣಾವಧಿ ಮೌಲ್ಯಮಾಪನ ಎನ್ನುವರು”
- “ಬೋಧನೆಯ ವಿವಿಧ ಹಂತಗಳಲ್ಲಿ ವಿದ್ಯಾರ್ಥಿಯ ಕಲಿಯುವಿಕೆಯನ್ನು ಮೌಲ್ಯಮಾಪನ ಮಾಡುವುದಕ್ಕೆ ರೂಪಣಾವಧಿ ಮೌಲ್ಯಮಾಪನ ಎನ್ನುವರು.”
- ಉದಾ: ಟೆಸ್ಟ್, ಮಾಸಿಕ, ತ್ರೈಮಾಸಿಕ, ಅರ್ಧವಾರ್ಷಿಕ,



# ರಚನಾತ್ಮಕ ಮೌಲ್ಯಮಾಪನದ ಉಪಯೋಗಗಳು



- 1.ಬೋಧನೆ ಮತ್ತು ಕಲಿಕೆಯನ್ನು ಪರಿಣಾಮಕಾರಿಗೊಳಿಸುತ್ತದೆ.
- 2. ಕಲಿಕೆಗೆ ಪುಷ್ಠೀಕರಣ, ಪ್ರೇರಣೆ ಹಾಗೂ ಉತ್ತೇಜನ ನೀಡುತ್ತದೆ.
- 3. ಶಿಕ್ಷಣದ ಗುರಿಗಳತ್ತ ಸಾಗಲು ಸುಲಭವಾಗಿ ನೆರವಾಗುತ್ತದೆ.
- 4. ಕಲಿಕೆಯ ಲೋಪದೋಷಗಳಿಗೆ ತಕ್ಷಣವೆ ಪರಿಹಾರ ಒದಗಿಸುತ್ತದೆ.
- 5. ಬೋಧನೆಯನ್ನು ಪುನರ್ ವ್ಯವಸ್ಥೆಗೊಳಿಸುತ್ತದೆ.
- 6. ಶಿಕ್ಷಕ ತಾನು ಮಾಡಿದ ಘಟಕ ಬೋಧನೆ ಮುಗಿದ ನಂತರ ವಿದ್ಯಾರ್ಥಿಗಳಲ್ಲಿ ಎಷ್ಟರ ಮಟ್ಟಿಗೆ ಅರ್ಥವಾಗಿದೆ ಎಂಬುದನ್ನು ತಿಳಿಸುತ್ತದೆ.
- ಪೂರೈಕೆ ಪ್ರಕ್ರಿಯೆ ಹಾಗೂ ಉತ್ಪನ್ನ ಇವುಗಳ ಬಂಧನವನ್ನು ಹೆಚ್ಚು ಅರ್ಥಪೂರ್ಣವಾಗುತ್ತದೆ.
- ಕಲಿಸುವವರು ಮತ್ತು ಕಲಿಯುವವರನ್ನು ಸದಾ ಜಾಗೃತವಾಗಿರುವಂತೆ ಮಾಡುವುದು.

# ಸಂಕಲನಾತ್ಮಕ ಮೌಲ್ಯಮಾಪನ



- **ಅರ್ಥ:-** "ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ಯಾವ ತರನಾದ ಪ್ರಗತಿಯನ್ನು ಹೊಂದಿರುವರೆಂಬುದನ್ನು ತಿಳಿಯಲು ಕೈಗೊಳ್ಳುವ ಕ್ರಮವೇ ಸಂಕಲನಾತ್ಮಕ ಮೌಲ್ಯಮಾಪನ" ಎನ್ನುವರು.
- "ಇಡೀ ಒಂದು ವರ್ಷದ ಕೊನೆಯಲ್ಲಿ ವಿದ್ಯಾರ್ಥಿಗಳ ಸಾಧನಮಟ್ಟವನ್ನು ನಿರ್ಧರಿಸುವುದಕ್ಕೆ ಸಂಕಲನಾತ್ಮಕ ಮೌಲ್ಯಮಾಪನ ಎನ್ನುವರು".
- "ಒಂದು ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಕಂಡುಬರುವ ವಿದ್ಯಾರ್ಥಿಗಳ ಸಾಧನೆಯನ್ನು ಗುರುತಿಸುವ ಸಮಗ್ರ ವಿಧಾನವೇ ಸಂಕಲನಾತ್ಮಕ ಮೌಲ್ಯಮಾಪನ".
- "ಒಂದು ಹಂತದ ಬೋಧನೆ ಮತ್ತು ಕಲಿಕೆ ಮುಗಿದ ಮೇಲೆ ಶಿಕ್ಷಣದ ಉದ್ದೇಶಗಳು ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ತಿಳಿಯುವ ವಿಧಾನವೇ ಸಂಕಲನಾತ್ಮಕ ಮೌಲ್ಯಮಾಪನ

# ಸಂಕಲನಾತ್ಮಕ ಮೌಲ್ಯಮಾಪನದ ಉಪಯೋಗಗಳು



- 1. ಪ್ರಗತಿಯ ಪೂರ್ಣ ಚಿತ್ರವನ್ನು ಕೊಡುತ್ತದೆ.
- 2. ಮುಂದಿನ ವರ್ಗಕ್ಕೆ ತೇರ್ಗಡೆ ಮಾಡಲು, ಪ್ರಶಸ್ತಿ ಪತ್ರ ನೀಡಲು ಸಹಾಯಕಾರಿಯಾಗಿದೆ.
- 3. ವೃತ್ತಿಗೆ ಆಯ್ಕೆ ಮಾಡಲು ಬರುತ್ತದೆ.
- 4. ಹೆಚ್ಚಿನ ವ್ಯಾಸಂಗಕ್ಕೆ ಸಹಾಯಕಾರಿಯಾಗಿದೆ.
- 5. ವಿದ್ಯಾರ್ಥಿಗಳಲ್ಲಿ ವಿಚಾರಶಕ್ತಿ ಹಾಗೂ ನೆನಪಿನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
- 6. ಸುದಿರ್ಘ ಅಧ್ಯಯನಕ್ಕೆ ದಾರಿ ಮಾಡಿಕೊಡುವುದು.
- 7. ವೈಯಕ್ತಿಕ ಭಿನ್ನತೆಯನ್ನು ಅರಿಯಲು ನೆರವಾಗುವುದು.
- 8. ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ಗುರುತಿಸಲು ಸಹಾಯಕ.

# ರಚನಾತ್ಮಕ ಮೌಲ್ಯಮಾಪನ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳಿಗಿರುವ ವ್ಯತ್ಯಾಸ

- **ಸಂಕಲನಾತ್ಮಕ ಮೌಲ್ಯಮಾಪನ**
- 1) ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ನಡೆಯುವ ಪರೀಕ್ಷೆ ಉದಾ: ವಾರ್ಷಿಕ ಪರೀಕ್ಷೆ
- 2) ಮುಂದಿನ ತರಗತಿಗೆ ತೇರ್ಗಡೆಗೆ ಅವಕಾಶವಿದೆ.
- 3) ಕಲಿಕೆಯ ಪ್ರಗತಿಯನ್ನು ಸಮಗ್ರವಾಗಿ ಅಳೆಯುವ ಮೌಲ್ಯಮಾಪನ

- **ರಚನಾತ್ಮಕ ಮೌಲ್ಯಮಾಪನ**
- 1) ವರ್ಷವಿಡೀ ನಿರಂತರ ಪರೀಕ್ಷೆ ಉದಾ: ಮಾಸಿಕ, ತ್ರೈಮಾಸಿಕ ಪರೀಕ್ಷೆ.
- 2) ದೋಷಗಳನ್ನು ಗುರುತಿಸಿ ಪರಿಹಾರಕ್ಕೆ ಅವಕಾಶವಿದೆ.
- 3) ಕಲಿಕೆಯ ಪ್ರಗತಿಯನ್ನು ಕ್ರಮಬದ್ಧವಾಗಿ ತಿಳಿಯುವ ಮೌಲ್ಯಮಾಪನ

# ರಚನಾತ್ಮಕ ಮೌಲ್ಯಮಾಪನ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳಿಗಿರುವ ವ್ಯತ್ಯಾಸ

- 4) ಮೌಲ್ಯಮಾಪನ ಒಂದು ವರ್ಷದಲ್ಲಿ ಒಂದೇ ಬಾರಿ ನಡೆಯುತ್ತದೆ.
- 5) ಶ್ರೇಣಿಗೆ ಅವಕಾಶವಿದೆ.
- 6) ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ನೀಡಲು ಸಾಧ್ಯ.

- 4) ಮೌಲ್ಯಮಾಪನ ಒಂದು ವರ್ಷದಲ್ಲಿ ಅನೇಕ ಬಾರಿ ನಡೆಯುತ್ತದೆ.
- 5) ಶ್ರೇಣಿಗೆ ಅವಕಾಶವಿಲ್ಲ.
- 6) ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಸಾಧ್ಯವಿಲ್ಲ.

# ರಚನಾತ್ಮಕ ಮೌಲ್ಯಮಾಪನ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳಿಗಿರುವ ವ್ಯತ್ಯಾಸ

- 7) ಪಠ್ಯಕ್ರಮದ ಪುನರ್‌ರಚನೆಗೆ ಇದು ಅನುಕೂಲವಾಗಿದೆ.
- 8) ಪರಿಹಾರಾತ್ಮಕ ಪುಷ್ಠೀಕರಣಕ್ಕೆ ಅವಕಾಶವಿಲ್ಲ.
- 9) ಕಲಿಕೆಯ ಇತಿಮಿತಿಗಳನ್ನು ವರ್ಷದ ಕೊನೆಯ ಫಲಿತಾಂಶ ಘೋಷಿಸುವ ಮೊದಲು ಗುರ್ತಿಸುವುದು ಈ ಮೊದಲು ಬರೀ ಬೋಧನೆಯಾಗುವುದು.

- 7) ಬೋಧನೆ ಮತ್ತು ಕಲಿಕಾ ಪದ್ಧತಿಗಳನ್ನು ಸುಧಾರಿಸಲು ಅನುಕೂಲವಾಗುತ್ತದೆ.
- 8) ಪರಿಹಾರಾತ್ಮಕ ಪುಷ್ಠೀಕರಣಕ್ಕೆ ಅವಕಾಶವಿದೆ.
- 9) ಕಲಿಕೆಯನ್ನು ಆಗಾಗ್ಗೆ ಪರೀಕ್ಷಿಸುವುದು ಇದರಿಂದ ಅವಶ್ಯಕ ಪ್ರತಿ ಪೋಷಣೆ ವಿದ್ಯಾರ್ಥಿಗೆ ದೊರೆಯುವುದು ತಕ್ಷಣ ತಪ್ಪಿಸುತ್ತಗೆ. ಮುಂದಿನ ಕಲಿಕಗೆ ಸಹಾಯವಾಗುವುದು

# ನಿಯೋಜನ ಮೌಲ್ಯಮಾಪನ

- ಅರ್ಥ:– "ಯಾವ ವಸ್ತುವಿಗೆ ಯಾವ ಸ್ಥಾನ ಹಾಗೂ ಯಾವ ಸ್ಥಳದಲ್ಲಿ ಗೌರವಿಸಬೇಕು ಎಂಬುದು ನಿಯೋಜನ ಮೌಲ್ಯಮಾಪನ".
- "ವಿದ್ಯಾರ್ಥಿ ಒಬ್ಬನನ್ನು ಅವನ ಶೈಕ್ಷಣಿಕ ಸಾಧನೆ ಮತ್ತು ವೈಯಕ್ತಿಕ ಭಿನ್ನತೆ ನಿರ್ಧರಿಸಿ ಸೂಕ್ತವಾದ ಸ್ಥಾನ ನೀಡುವುದೇ ನಿಯೋಜನ ಮೌಲ್ಯಮಾಪನ".
- "ವಿದ್ಯಾರ್ಥಿಗಳ ಮಾನಸಿಕ ಸಾಮರ್ಥ್ಯವನ್ನು ಪೂರ್ವನ್ವಯವಾಗಿ ಹಲವು ವಿಧಾನ ಮತ್ತು ತಂತ್ರಗಳ ಮೂಲಕ ಅವರ ಸಾಧನೆ ಶ್ರೇಣಿಯನ್ನು ಗುರುತಿಸಿ ಬೋಧನಾ ಕಾರ್ಯವನ್ನು ಕೈಗೊಳ್ಳುವ ಕ್ರಮವನ್ನು ನಿಯೋಜನ ಮೌಲ್ಯಮಾಪನ" ಎಂದು ಡಾ॥ ಎನ್.ಎಸ್.ವೀರಪ್ಪನವರ ಅಭಿಪ್ರಾಯಪಟ್ಟಿರುವುರು.
- "ವಿದ್ಯಾರ್ಥಿಯು ವಿವಿಧ ವಿಷಯಗಳಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಸಾಧನೆಯನ್ನು ನಿರ್ಧರಿಸಿ ಆತನನ್ನು ಒಂದು ನಿರ್ಧಿಷ್ಟ ಸ್ಥಾನದಲ್ಲಿ ಬಿಂಬಿಸುವ ಕ್ರಮವೇ ನಿಯೋಜನ ಮೌಲ್ಯಮಾಪನ".

# ನಿಯೋಜನ ಮೌಲ್ಯಮಾನದ ಉಪಯೋಗಗಳು.

- 1. ವ್ಯಕ್ತಿಗತ ವ್ಯತ್ಯಾಸಗಳನ್ನು ಅರಿಯಲು ನೆರವಾಗುವುದು.
- 2. ಪರಿಹಾರಾತ್ಮಕ ಬೋಧನೆಯನ್ನು ಮಾಡಲು ಪ್ರೇರೇಪಿಸುವುದು.
- 3. ಬುದ್ಧಿವಂತ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರೋತ್ಸಾಹಿಸಲು ಸಹಾಯಕವಾಗಿದೆ.
- 4. ವಿದ್ಯಾರ್ಥಿಗಳ ಸಾಮರ್ಥ್ಯಕ್ಕನುಗುಣವಾಗಿ ಬೋಧನಾ ಕ್ರಮದಲ್ಲಿ ಸುಧಾರಣೆ ತಂದುಕೊಳ್ಳಲು ನೆರೆವಾಗುವುದು.
- 5. ವೃತ್ತಿ ಶಿಕ್ಷಣದ ಪ್ರವೇಶವನ್ನು ಕೊಡುವಾಗ ಮತ್ತು ಶಾಲೆಗೆ ಸೇರುವಾಗ ನೆರವು ನೀಡುವುದು.
- 6. ಉದ್ಯೋಗ ಮತ್ತು ತರಬೇತಿಯನ್ನು ಪಡೆಯುವಾಗ ಸಹಾಯವಾಗುತ್ತದೆ.

# ನೈದಾನಿಕ ಮೌಲ್ಯಮಾಪನ

- ಅರ್ಥ:– ನೈದಾನಿಕ ಮೌಲ್ಯಮಾಪನವನ್ನು ದೌರ್ಬಲ್ಯ ಅಥವಾ ದೋಷ ನಿಧಾನ ಮೌಲ್ಯಮಾಪನವೆಂತಲೂ ಕರೆಯಲಾಗುವುದು. ಈ ಬಗೆಯ ಮೌಲ್ಯಮಾಪನವನ್ನು ತರಗತಿಯ ಸನ್ನೀವೇಶದಲ್ಲಿ ಮಾಡಲಾಗುವುದು.
- ‘‘ಶಿಕ್ಷಕನು ವೈಜ್ಞಾನಿಕ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಏಕೆ, ಹೇಗೆ ಮತ್ತು ಎಲ್ಲಿ ತಪ್ಪು ಮಾಡುವವರು ಎಂಬುದನ್ನು ನಿರ್ದಿಷ್ಟವಾಗಿ ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ನೈದಾನಿಕ ಮೌಲ್ಯಮಾಪನ’’, ಎಂದು ಕರೆಯುವರು.
- ‘‘ವಿದ್ಯಾರ್ಥಿಗಳ ಕಲಿಕೆಯಲ್ಲಿನ ದೋಷಗಳನ್ನು ಹಲವಾರು ಸಾಧನ ಅಥವಾ ತಂತ್ರಗಳ ಮೂಲಕ ಗುರುತಿಸುವ ವಿಧಾನವನ್ನು ನೈದಾನಿಕ ಮೌಲ್ಯಮಾಪನ’’, ಎಂದು ಕರೆಯುವರು.

# ನೈದಾನಿಕ ಮೌಲ್ಯಮಾಪನದ ಕಾರಣಗಳು

- 1. ಉತ್ತಮ ಮಾರ್ಗದರ್ಶನದ ಕೊರತೆ.
- 2. ಶಾಲೆಗೆ ಸುದೀರ್ಘವಾಗಿ ಗೈರು ಹಾಜರಾಗುವುದು.
- 3. ಹಿತಕರವಲ್ಲದ ಮನೆ ಮತ್ತು ಶಾಲೆಯ ವಾತಾವರಣ.
- 4. ವೈಯಕ್ತಿಕವಾಗಿ ಗಮನಹರಿಸದಿರುವುದು.
- 5. ಪೋಷಕರ ಪ್ರೇರಣೆ ಮತ್ತು ಪ್ರೋತ್ಸಾಹ ಇಲ್ಲದಿರುವುದು.

# ನೈದಾನಿಕ ಮೌಲ್ಯಮಾಪನದ ಪರಿಹಾರ

- 1. ಶಿಕ್ಷಕರು ಮಕ್ಕಳ ಚಟುವಟಿಕಗಳನ್ನು ಗಮನಿಸಿ ದೋಷಗಳನ್ನು ತಿದ್ದಬೇಕು.
- 2. ದೃಷ್ಟಾಂತ ಸಹಿತ ವಿವರಣೆ ನೀಡಬೇಕು.
- 3. ಮಾದರಿ ಉತ್ತರಗಳನ್ನು ನೀಡುವುದು.
- 4. ಗುಂಪಿನಿಂದ ಪ್ರತ್ಯೇಕಿಸಿ ತಪ್ಪುಗಳನ್ನು ತಿದ್ದಬೇಕು.
- 5. ಕಾಗುಣಿತ, ಉಚ್ಛಾರಣೆ, ಬರವಣಿಗೆ ಮುಂತಾದ ದೋಷಗಳನ್ನು ಸರಿಪಡಿಸಬೇಕು.

# ನೈದಾನಿಕ ಮೌಲ್ಯಮಾಪನದ ಉಪಯೋಗಗಳು

- 1. ಕಾಗುಣಿತ, ಉಚ್ಚಾರಣಾ ದೋಷಗಳನ್ನು ನಿವಾರಿಸುವುದು.
- 2. ಕಲಿಕೆಯ ಗುಣಮಟ್ಟವನ್ನು ಉತ್ತಮ ಪಡಿಸುವುದು.
- 3. ವೈಯಕ್ತಿಕ ಭಿನ್ನತೆಯನ್ನು ಅರಿಯಲು ನೆರವಾಗುವುದು.
- 4. ಮೇಲ್ವಿಚಾರಣೆ ಮತ್ತು ಮಾರ್ಗದರ್ಶನಕ್ಕೆ ಒತ್ತು ನೀಡುವುದು.
- 5. ಕಲಿಕೆಯ ದೋಷದ ಮೂಲವನ್ನು ಪತ್ತೆ ಹಚ್ಚಲು ನೆರವಾಗುವುದು.
- 6. ಕಲಿಕೆಯಲ್ಲಿನ ದೋಷಗಳು ಪುನರಾವರ್ತನೆಯಾಗದಂತೆ ತಡೆಗಟ್ಟುವುದು.
- 7. ವಿದ್ಯಾರ್ಥಿಗಳು ಹೊಂದಿರುವ ವಿಷಯದ ಗ್ರಹಿಕೆಯನ್ನು ಅರಿಯಲು ನೆರವಾಗುವುದು
- 8. ಶಿಕ್ಷಕರು ತಮ್ಮ ಬೋಧನೆಯ ಪರಿಣಾಮವನ್ನು ತಿಳಿಯಲು ಸಹಾಯಕವಾಗುವುದು.
- 9. ವಿದ್ಯಾರ್ಥಿಗಳ ಆಸಕ್ತಿ ಮತ್ತು ಅಭಿರುಚಿಗೆ ತಕ್ಕಂತೆ ಬೋಧಿಸಲು ಸಹಾಯಕ.

- ಒಟ್ಟಾರೆಯಾಗಿ ಬೋಧನೆ ಮತ್ತು ಕಲಿಕೆಯ ಒಟ್ಟಾರೆ ಪರಿಣಾಮವನ್ನು ಗುರುತಿಸಲು ಮೌಲ್ಯಮಾಪನ ಅವಶ್ಯಕವಿದ್ದು ರೂಪಾಣಾತ್ಮಕ ಮೌಲ್ಯಮಾಪನ ಶೈಕ್ಷಣಿಕ ಸಾಧನೆಗಳನ್ನು ಅರಿಯಲು ಸಹಾಯಕವಾಗಿದೆ.

# ಧನ್ಯವಾದಗಳು